ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 14–12–2020

# ಪತ್ರಿಕಾ ಪ್ರಕಟಣೆ

## ಅಗ್ನಿಶಾಮಕ ಇಲಾಖೆಯಲ್ಲಿ ಡಿಸೆಂಬರ್ 20ರ ವರೆಗೆ ಸಕಾಲ ಸಪ್ತಾಹ

ಬೆಂಗಳೂರು, ಡಿಸೆಂಬರ್ 14 (ಕರ್ನಾಟಕ ವಾರ್ತೆ) : ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಲ್ಲಿ ಐದು ಸೇವೆಗಳನ್ನು ಸಕಾಲ ವ್ಯಾಪ್ತಿಯಲ್ಲಿ ತಂದಿದ್ದು, ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಡಿಸೆಂಬರ್ 20ರ ವರೆಗೆ ಸಕಾಲ ಸಪ್ತಾಹವನ್ನು ಹಮ್ಮಿಕೊಳ್ಳಲಾಗಿದೆ.

ಹೊಸ ಅರ್ಜಿಗಳನ್ನು ಸಕಾಲದಲ್ಲಿ ಸ್ವೀಕರಿಸಿ, ನಿಗಧಿತ ಕಾಲಮಿತಿಯಲ್ಲಿ ವಿಲೇವಾರಿ ಮಾಡಲಾಗುವುದು. ಸಪ್ತಾಹದ ಅಂತ್ಯದಲ್ಲಿ ವಿಲೇವಾರಿ ಮಾಡಲಾದ ಅರ್ಜಿಗಳ ಕುರಿತು ಸಕಾಲ ಮಿಷನ್‌ಗೆ ವರದಿ ನೀಡಲಾಗುತ್ತದೆ.

ಅಗ್ನಿ ಶಾಮಕ ಇಲಾಖೆಯಲ್ಲಿನ ಐದು ಸೇವೆಗಳಾದ ಬಹುಮಹಡಿ ಕಟ್ಟಡಗಳಿಗೆ ನಿರ್ಮಾಣ ಪೂರ್ವದಲ್ಲಿ ನೀಡಲಾಗುವ ನಿರಾಕ್ಷೇಪಣಾ ಪ್ರಮಾಣ ಪತ್ರ. ಬಹುಮಹಡಿ ಕಟ್ಟಡಗಳಿಗೆ ನಿರ್ಮಾಣದ ನಂತರದಲ್ಲಿ ನೀಡಲಾಗುವ ಕ್ಲಿಯರೆನ್ಸ್ ಪ್ರಮಾಣ ಪತ್ರ. ಬೆಂಕಿ ಆಕಸ್ಮಿಕದ ತುರ್ತು ಕರೆಗೆ ಪ್ರತಿಕ್ರಿಯೆ, ಅಪಘಾತ ನೈಸರ್ಗಿಕ ವಿಪತ್ತು, ರಕ್ಷಣಾ ಕಾರ್ಯ ಮತ್ತು ವಿಪತ್ತು ನಿರ್ವಹಣೆಯ ತುರ್ತು ಕರೆಗಳಿಗೆ ಪ್ರತಿಕ್ರಿಯೆ ಮತ್ತು ಪಟಾಕಿಗಳ ಲೈಸನ್ಸ್‌ಗಾಗಿ ನಿರಾಕ್ಷೇಪಣಾ ಪತ್ರವನ್ನು ಸಕಾಲದಡಿಯಲ್ಲಿ ನೀಡಲು ಸಂಯೋಜಿತಗೊಂಡಿರುತ್ತವೆ. ಸಂಯೋಜಿತಗೊಂಡಿರುವ ಸೇವೆಗಳನ್ನು ಸಾರ್ವಜನಿಕರು **https://sevasindhu.karnataka.gov.in** ವೆಬ್‌ಸೈಟ್‌ನಿಂದ ಪಡೆಯಬಹುದು.

ಸಾರ್ವಜನಿಕರು ಇವುಗಳನ್ನು ಸದುಪಯೋಗ ಪಡೆದುಕೊಳ್ಳುವಂತೆ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಪೊಲೀಸ್ ಮಹಾ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# <u>ಕಲೆಯೊಂದಿಗೆ ಗಣಿತ ಕುರಿತ ವರ್ಚುವಲ್ ಕಾರ್ಯಾಗಾರ</u>

ಬೆಂಗಳೂರು, ಡಿಸೆಂಬರ್ 14 (ಕರ್ನಾಟಕ ವಾರ್ತೆ) : ಜವಾಹರ್‌ಲಾಲ್ ನೆಹರು ತಾರಾಲಯವು ರಾಷ್ಟ್ರೀಯ ಗಣಿತ ದಿನದ ಅಂಗವಾಗಿ ಡಿಸೆಂಬರ್ 22 ರಂದು ಅಪರಾಹ್ನ 3 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ವರ್ಚುವಲ್ ಕಾರ್ಯಾಗಾರವನ್ನು ಆಯೋಜಿಸಿದೆ.

ಗಣಿತವನ್ನು ಕಲೆಯ ಮುಖಾಂತರ ತಿಳಿಯುವ ಧ್ಯೇಯದೊಂದಿಗೆ ಆಯೋಜಿಸಲಾಗಿರುವ ಕಾರ್ಯಾಗಾರದಲ್ಲಿ "ಸಮ್ಮಿತಿ" ಎಂಬ ವಿಷಯವನ್ನು ಕಲಾತ್ಮಕ ಚಟುವಟಿಕೆಗಳ ಮೂಲಕ ಚರ್ಚಿಸಲಾಗುವುದು.

ಆಸಕ್ತ ಪ್ರೌಢಶಾಲಾ ವಿದ್ಯಾರ್ಥಿಗಳು 100/- ರೂ.ಗಳ ಶುಲ್ಕವನ್ನು ಪಾವತಿಸಿ, ಡಿಸೆಂಬರ್ 19 ರೊಳಗೆ ನೊಂದಾಯಿಸಿಕೊಳ್ಳಬೇಕು. ಮೈಕ್ರೋಸಾಫ್ಟ್ ಟೀಮ್ಸ್ ಮೂಲಕ ಈ ಆನ್ ಲೈನ್ ಕಾರ್ಯಾಗಾರವನ್ನು ನಡೆಸಲಾಗುವುದು. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ : 22379725/22266084 ಅಥವಾ ವೆಬ್‌ಸೈಟ್ info@taralaya.org ಅಥವಾ www.taralaya.org ನ್ನು ಸಂಪರ್ಕಿಸಬಹುದು.

## Karnataka State Pollution Control Board
## ParisaraBhavan, Bengaluru
## AQI of the CAAQM stations established in Bengaluru City
## <u>Date :14.12.2020</u>

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | * | * | * |
| 2 | Jayanagar 5th Block, Shalini ground | * | * | * |
| 3 | KAVIKA, Mysore Road | 102 | Moderate | $PM_{10}$ |
| 4 | Rajeev Gandhi Institute of Chest Disease, NIMHANS, Hombegowda Nagar | 126 | Moderate | $PM_{10}$ |

| | | | | |
|---|---|---|---|---|
| 5 | HSR Layout, near Central Silkboard | 85 | Satisfactory | $PM_{2.5}$ |
| 6 | City Railway Station, Magestic, Bengaluru | 71 | Satisfactory | CO |
| 7 | Saneguruvanahalli, NisargaBhavan, KSPCB, Shivanagara | 44 | Good | $PM_{10}$ |
| 8 | BWSSB, Kadabesanahalli | * | * | * |
| 9 | Peenya | 151 | Moderate | $O_3$ |
| 10 | BTM Layout | 67 | Satisfactory | $O_3$ |

| Category (Range) | Possible Health Impacts | Category (Range) | Possible Health Impacts |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older | Severe (>401) | Respiratory effects even on healthy people |

**ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**

**ಪರಿಸರ ಭವನ, ಬೆಂಗಳೂರು.**

**ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ನಿರಂತರ ಪರಿವೇಷ್ಠಕ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕ (AQI), ಬೆಂಗಳೂರು**

**ದಿನಾಂಕ: 14.12.2020**

| ಕ್ರಮ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ | ವರ್ಗ | ಪ್ರಮುಖ |
|---|---|---|---|---|

| ಸಂಖ್ಯೆ | | ಸೂಚ್ಯಂಕ (AQI) | | ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | * | * | * |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | * | * | * |
| 3 | ಕವಿಕ, ಮೈಸೂರುರಸ್ತೆ | 102 | ಸಾಧಾರಣ | $PM_{10}$ |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 126 | ಸಾಧಾರಣ | $PM_{10}$ |
| 5 | ಹೆಚ್.ಎಸ್.ಆರ್ ಲೇಔಟ್, [illegible] | 85 | ತೃಪ್ತಿಕರ | $PM_{2.5}$ |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 71 | ತೃಪ್ತಿಕರ | CO |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, | 44 | ಉತ್ತಮ | $PM_{10}$ |
| 8 | BWSSB, ಕಾಡಬೀಸನಹಳ್ಳಿ | * | * | * |
| 9 | ಪೀಣ್ಯ | 151 | ಸಾಧಾರಣ | $O_3$ |
| 10 | ಬಿಟಿಎಂ ಲೇಔಟ್ | 67 | ತೃಪ್ತಿಕರ | $O_3$ |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |
| **ತೀವ್ರ (>401)** | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |

**ಆಗುಂಬೆ ಅರಣ್ಯ ವಲಯದ ಕಟ್ಟೆಕೊಪ್ಪ ಗ್ರಾಮಕ್ಕೆ ಅನಂತ ಹೆಗಡೆ ಆಶೀಸರ**

**ಬೆಂಗಳೂರು, ಡಿಸೆಂಬರ್ 14 (ಕರ್ನಾಟಕ ವಾರ್ತೆ):**

***ಶಿವಮೊಗ್ಗ:*** ಆಗುಂಬೆ ಅರಣ್ಯ ವಲಯದ ಕಟ್ಟೆಕೊಪ್ಪ ಗ್ರಾಮದ 589 ಎಕರೆ ಡೀಮ್ಡ್ ಅರಣ್ಯ ವಿನಾಶದ ಅಂಚಿನಲ್ಲಿದೆ. ಅರಣ್ಯ ಇಲಾಖೆ ಹಾಗೂ ಕಂದಾಯ ಇಲಾಖೆ ಈ ಜೈವಿಕ ಭಂಡಾರಕ್ಕೆ ರಕ್ಷಣೆ ನೀಡಲು ಜೀವವೈವಿಧ್ಯ ಮಂಡಳಿ ಸೂಚನೆ ಹಾಗೂ ಮಂಡಳಿಯ ತಂಡ ಇತ್ತೀಚೆಗೆ ಸ್ಥಳಕ್ಕೆ ಭೇಟಿ

**ಹಿನ್ನೆಲೆ ಮತ್ತು ವಿವರ**: ತೀರ್ಥಹಳ್ಳಿ ತಾಲೂಕಿನ ಎಕ್ಕದ್ದೆ, ಕೈನಲ್ಲಿ, ಡಿಂಡ, ದೊಡ್ಡಿನಮನೆ, ಕರುಣಾಪುರ ಗ್ರಾಮಗಳ ರೈತರು ತಮ್ಮ ಸುತ್ತಲಿನ 589 ಎಕರೆ ದಟ್ಟ ಅರಣ್ಯ ಪ್ರದೇಶ ರಕ್ಷಣೆಗೆ ಬರಬೇಕು ಎಂದು ಕರ್ನಾಟಕ ಜೀವವೈವಿಧ್ಯ ಮಂಡಳಿ, ಅರಣ್ಯ ಇಲಾಖೆಗೆ ದೂರು ಸಲ್ಲಿಸಿದ್ದರು. ಈ ಹಳ್ಳಿಗಳ ಪಕ್ಕದ ಕಟ್ಟೆಕೊಪ್ಪ ಗ್ರಾಮ ಸರ್ವೆ ನಂ. 98 ರಲ್ಲಿ 267 ಎಕರೆ ಅರಣ್ಯ, 72 ಸ.ನಂ. ನಲ್ಲಿ 267 ಎಕ್ರೆ ಅರಣ್ಯ, 115 ಸ.ನಂ. ನಲ್ಲಿ 55 ಎಕರೆ ಅರಣ್ಯ, ಇವು  ನಾಲ್ಕಾಣೆ ಕಂದಾಯ ಭೂಮಿ ಎಂದು ಹೆಸರು ಪಡೆದಿದೆ. 1951 ರಲ್ಲಿ 3 ಜನ ಖಾಸಗಿಯವರ ಹೆಸರಲ್ಲಿ ಈ ಅರಣ್ಯ ಭೂಮಿ ಭೂದಾಖಲೆ ಇದೆ. ಎಂದು ಹೇಳಲಾಗಿದೆ. ಇದೀಗ ಖಾಸಗಿ ವ್ಯಕ್ತಿಗಳು ಅರಣ್ಯ ಸೂರೆ ಮಾಡಲು ತಯಾರಿ ನಡೆಸಿದ್ದಾರೆ. ಅರಣ್ಯ ಭೂಮಿ ಮಾರಾಟ ಮಾಡಲು ಮುಂದಾಗಿದ್ದಾರೆ ಎಂದು ಹಳ್ಳಿಗಳ ಪ್ರಜ್ಞಾವಂತ ರೈತರು ಧ್ವನಿ ಎತ್ತಿದ್ದಾರೆ.

ಇತ್ತೀಚೆಗೆ (10-12-2020) ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಶ್ರೀ ಅನಂತ ಹೆಗಡೆ ಅಶೀಸರ ಅವರ ತಂಡ ಹಾಗೂ ಅರಣ್ಯ ಅಧಿಕಾರಿಗಳು ಕಟ್ಟೆಕೊಪ್ಪ ಗ್ರಾಮ ಅರಣ್ಯ ಪ್ರದೇಶಕ್ಕೆ ಭೇಟಿ ನೀಡಿ ಪರಿಸ್ಥಿತಿ ಪರಿಶೀಲಿಸಿದರು. "ಖಾಸತಿಯವರ ಕೈಯಲ್ಲಿದೆ ಎಂದು ಹೇಳಲಾದರೂ ಈ ಅರಣ್ಯಭೂಮಿ ನೈಸರ್ಗಿಕ ದಟ್ಟ ಅರಣ್ಯ ಪ್ರದೇಶವಾಗಿದೆ. ಡೀಮ್ಡ್ ಅರಣ್ಯ ವ್ಯಾಪ್ತಿಯಲ್ಲಿ ಸೇರಿದೆ. ಜೀವವೈವಿಧ್ಯ ಕಾಯಿದೆ, ವನ್ಯ ಜೀವಿ ಕಾಯಿದೆ, ಅರಣ್ಯ ಕಾಯಿದೆ, ಕಂದಾಯ ಕಾಯಿದೆಗಳ ಪ್ರಕಾರ ಖಾಸಗಿಯವರು ಅರಣ್ಯ ನಾಶ ಮಾಡಲು ಅಥವಾ ಅರಣ್ಯೇತರ ಚಟುವಟಿಕೆ ನಡೆಸಲು ಅವಕಾಶ ಇಲ್ಲ. ಮೂಕಾಂಬಿಕಾ ಅಭಯಾರಣ್ಯ, ಸೋಮೇಶ್ವರ ಅಭಯಾರಣ್ಯಗಳ ಸಮೀಪ, ಮಾಣಿ, ವಾರಾಹಿ ಅಣೆಕಟ್ಟೆ ಜಲಾಶಯಗಳಿಗೆ ಹೊಂದಿಕೊಂಡಿರುವ ಈ ಅರಣ್ಯ ಪ್ರದೇಶದ ಸಂರಕ್ಷಣೆ ಬಗ್ಗೆ ಜಿಲ್ಲಾಡಳಿತ, ಜಿಲ್ಲಾ ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಜೀವವೈವಿಧ್ಯ ಮಂಡಳಿ ಸೂಚನೆ ನೀಡಿದೆ. ಮಲೆನಾಡಿನ ದುರ್ಗಮ ದಟ್ಟ ಕಾಡಿನ ಪ್ರದೇಶದ ಹಳ್ಳಿಗಳ ರೈತರು ತಮ್ಮ ಸುತ್ತಲಿನ ಹಸಿರಿನ  ಉಳಿವಿಗೆ ಧ್ವನಿ ಎತ್ತಿ ಗಮನ ಸೆಳೆದಿದ್ದಾರೆ ಎಂದು ಅವರನ್ನು ಅಶೀಸರ ಅಭಿನಂದಿಸಿದ್ದಾರೆ.

**<u>ಇಂಥದೇ ಪ್ರಕರಣಗಳು:</u>** ತೀರ್ಥಹಳ್ಳಿ ತಾಲೂಕಿನ ಮಂಡಗದ್ದೆ, ಆಗುಂಬೆ ಅರಣ್ಯ ವಲಯಗಳಲ್ಲಿ ಖಾಸಗಿಯವರು ಸ್ವಾತಂತ್ರ ಪೂರ್ವ ಕಂದಾಯ ದಾಖಲೆ ತೋರಿಸಿ ಅರಣ್ಯ ನಾಶಕ್ಕೆ , ಭೂಕಬಳಕೆಗೆ ಮುಂದಾಗಿರುವ ಪ್ರಕರಣಗಳವೆ. ಇವೆಲ್ಲ ಖಾತೆಕಾನು, ನಾಲ್ಕಾಣೆ ಕಂದಾಯ ಭೂಮಿ, ಕಾಫಿಕಾನು ಮುಂತಾದ ಹೆಸರಲ್ಲಿದೆ. ಆದರೆ ಇವೆಲ್ಲ ಡೀಮ್ಡ್ ಅರಣ್ಯಗಳು. ಈ ಎಲ್ಲ ಪ್ರಕರಣಗಳ ಬಗ್ಗೆ ಕಂದಾಯ ಅರಣ್ಯ ಇಲಾಖೆಗಳು ಗಂಭೀರ ಪರಿಶೀಲನೆ ನಡೆಸಿ ಗ್ರಾಮಗಳ ನೈಸರ್ಗಿಕ ಸಂಪತ್ತಿನ ಸಂರಕ್ಷಣೆಗೆ ಅಗತ್ಯ ಕ್ರಮಕೈಗೊಳ್ಳಬೇಕು. ಈ ವಿಷಯದಲ್ಲಿ ನ್ಯಾಯಾಲಯಗಳ ಆದೇಶಗಳನ್ನು ಪರಿಗಣಿಸಬೇಕು ಎಂದು ಜೀವವೈವಿಧ್ಯ ಮಂಡಳ ಅಧ್ಯಕ್ಷರು ತಮ್ಮ ವರದಿಯಲ್ಲಿ ಎತ್ತಿ ಹೇಳಿದ್ದಾರೆ. ತಾವರೆಹಳ್ಳಿ, ಕುಡುಮಲ್ಲಿಗೆ, ನಾರಗೋಡ, ಹಗಲತ್ತಿ ಮುಂತಾದ ಪ್ರಕರಣಗಳ ಬಗ್ಗೆ ಅಶೀಸರ ಗಮನ ಸೆಳೆದಿದ್ದಾರೆ.

**<u>ಕುಂದಾದ್ರಿ ಪರ್ವತಕ್ಕೆ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷರ ಭೇಟಿ.</u>**

“ಜಾಗತಿಕ ಪರ್ವತ ದಿನ”ದ ಸಂದರ್ಭದಲ್ಲಿ ಜೀವ ವೈವಿದ್ಯ ಮಂಡಳಿ ಅಧ್ಯಕ್ಷ ಅನಂತಹೆಗಡೆ ಅಶೀಸರ ಅವರು ತೀರ್ಥಹಳ್ಳಿ ತಾ: ಕುಂದಾದ್ರಿ ಬೆಟ್ಟ ಪ್ರದೇಶಕ್ಕೆ ಭೇಟಿ ನೀಡಿದರು. ಅತಿ ಎತ್ತರದ ಪರ್ವತ ಪ್ರದೇಶ ಸೂರ್ಯಾಸ್ತ ವೀಕ್ಷಿಸಲು ಸಾವಿರಾರು ಪ್ರವಸಿಗರು ಇಲ್ಲಿಗೆ ಭೇಟಿ ನೀಡುತ್ತಿದ್ದಾರೆ. ಆದಾಗ್ಯೂ ಇಲ್ಲಿ ಪ್ಲಾಸ್ಟಿಕ್ ಮಾಲಿನ್ಯ ಇಲ್ಲ, ಪರಿಸರ ಪ್ರವಸೋದ್ಯಮಕ್ಕೆ ಕುಂದಾದ್ರಿ ಮಾದರಿಯಾಗಿದೆ. ಇದಕ್ಕಾಗಿ ಸ್ಥಳೀಯಅರಣ್ಯ ಅಧಿಕಾರಿಗಳು, ಸಿಬ್ಬಂದಿ, ಗ್ರಾಮ ಅರಣ್ಯ ಸಮೀತಿ, ಪರಿಸರ ಕಾರ್ಯಕರ್ತರನ್ನು ಶ್ರೀ ಅಶೀಸರ ಅಭಿನಂದಿಸಿದ್ದಾರೆ. ಇಲ್ಲಿನ ಔಷಧೀ ಮಾಲಿಕಾ ಸಂರಕ್ಷಿತ ಪ್ರದೇಶ (MPCA)ದ ಚಟುವಟಿಕೆಗಳು ಮದರಿಯಾಗಿದ” ಎಂದು ಜೀವವೈವಿಧ್ಯ ಮಂಡಳಿ ಅಧ್ಯಕ್ಷರು ಶ್ಲಾಘನೆ ವ್ಯಕ್ತಮಾಡಿದ್ದಾರೆ.

ಜಾಗತಿಕ ಪರ್ವತ ದಿನದ ಮುನ್ನಾ ದಿನ ಕುಂದಾದ್ರಿಗೆ ಭೇಟಿನೀಡಿರುವ ಅಶೀಸರ ಈ ವರ್ಷದ ಪರ್ವತ ದಿನದ ಘೋಷವಾಕ್ಯ “ಪರ್ವತ ಜೀವ ವೈವಿಧ್ಯ ಉಳಿಸಿ ಎಂಬುದಾಗಿದೆ” ಎಂದು ತಿಳಿಸಿದರು.

## ವೈಕುಂಠ ಏಕಾದಶಿ : ದರ್ಶನ ಇಲ್ಲ

**ಬೆಂಗಳೂರು, ಡಿಸೆಂಬರ್ 14 (ಕರ್ನಾಟಕ ವಾರ್ತೆ):**

**ಕೋವಿಡ್–19 ರ ಪ್ರಯುಕ್ತ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಅವರ ಆದೇಶದಂತೆ ದಿನಾಂಕ 25–12–2020 ರ ವೈಕುಂಠ ಏಕಾದಶಿ ದಿನದಂದು ಬೆಂಗಳೂರು ನಗರ ಕೋಟೆ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಭಕ್ತಾದಿಗಳಿಗೆ ದೇವರ ದರ್ಶನ ಹಾಗೂ ವೈಕುಂಠ ದ್ವಾರ ಪ್ರವೇಶ ಇರುವುದಿಲ್ಲ ಎಂದು ಹಿಂದೂ ಧಾರ್ಮಿಕ ಇಲಾಖೆಯ ಪ್ರಕಟಣೆ ತಿಳಿಸಿದೆ.**